# ಪುರಾಣಗಳು, ದೇವತೆಗಳು?

ಮತ್ತೊಮ್ಮೆ ಪುಸ್ತಕವೊಂದನ್ನು ಕುರಿತ ವಿವಾದ ಬುಗಿಲೆದ್ದಿದೆ. ಪ್ರಕಾಶಕರು ವೆಂಡಿ ಡೋನಿಯರ್ ಅವರ ದಿ ಹಿಂದೂ –ಎನ್ ಆಲ್ಟ ರ್ನೇಟಿವ್ ಹಿಸ್ಟರಿ ಪುಸ್ತಕವನ್ನು ಮಾರಾಟದಿಂದ ಹಿಂಪಡೆದಿದ್ದಾರೆ. ಪುರಾತನ ಕಾಲದಿಂದಲೂ ಸಂಸ್ಕೃತಿ ಚಿಂತಕರು ಭಾರತೀಯ ಸಂಸ್ಕೃತಿಯನ್ನು ಬಹುತ್ವದ ಚಹರೆಯಲ್ಲಿಯೇ ಗುರುತಿಸಿದ್ದಾರೆ. ವೈವಿಧ್ಯದಲ್ಲಿ ಏಕತೆಯನ್ನು ಸಾರಿದ್ದಾರೆ. ಸದ್ಯ, ಇನ್ನೊಬ್ಬರ ಭಾವನೆಗೆ ನೋವುಂಟು ಮಾಡುವ, ನಂಬಿಕೆಯನ್ನು ಅವಮಾನಿಸುವ ಪ್ರಶ್ನೆಯನ್ನು ಪದೇ ಪದೇ ಎತ್ತುತ್ತಾ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೆ ಹರಣಗೊಳಿಸುವ ಯತ್ನ ನಡೆಯುತ್ತಿದೆ. ಗತವನ್ನು ಲಭ್ಯ ಆಧಾರಗಳ ಮೇಲೆ ಪುನರ್‌ವ್ಯಾಖ್ಯಾನಿಸುವಾಗ ಶೀಲ–ಅಶ್ಲೀಲಗಳ ಪ್ರಶ್ನೆಯನ್ನು ಎತ್ತಿಕೊಳ್ಳುವದು ಅಸಂಗತವೆನಿಸುತ್ತದೆ. ಹಿಂದೂ ದೇವತೆಗಳು ಮನುಷ್ಯರ ತದ್ರೂಪವೇ ಆಗಿ ಒಳಿತು– ಕೆಡುಕುಗಳನ್ನು ಪ್ರತಿನಿಧಿಸುತ್ತಾ ಪೌರಾತ್ಯ ಪರಂಪರೆಯ ಸಮೃದ್ಧ ಕಥಾವಳಿಯಲ್ಲಿ ಪಾತ್ರಧಾರಿಗಳಾಗಿ ಜನಜೀವನದಲ್ಲಿ ಹಾಸುಹೊಕ್ಕಾಗಿ ಆರಾಧಿಸಲ್ಪಡುತ್ತಿದ್ದಾರೆ.

ಇಂದಿನ ವೈಚಾರಿಕರ ಸಮಸ್ಯೆಯೇನೆಂದರೆ ಅಧ್ಯಾತ್ಮವನ್ನು ದೇವತೆಗಳೊಂದಿಗೆ ತಳುಕು ಹಾಕಿ ನೋಡುವುದು. ದೇವತೆಗಳೂ ಸಹ ಅಧ್ಯಾತ್ಮವನ್ನು ಅರಸಿ ತಪಸ್ಸು ಮಾಡುತ್ತಿದ್ದರು. ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದರು. ಕಷ್ಟಕ್ಕೆ ಸಿಲುಕಿದಾಗ ಇನ್ನೊಬ್ಬ ದೇವರ ಮೊರೆ ಹೋಗುತ್ತಿದ್ದರು. ಇವೆಲ್ಲ ಏನನ್ನು ಸೂಚಿಸುತ್ತದೆ? ತಮಗಿಂತಲೂ ಪ್ರಬಲವಾದ ಇನ್ನೊಂದು ಶಕ್ತಿ ಇದೆ ಎಂಬುದನ್ನು ಅವರು ನಂಬಿದ್ದರು.

ವೈದಿಕ ಪುರಾಣಗಳಲ್ಲಿರುವಂತೆಯೆ ಗ್ರೀಕ್ ಪುರಾಣದಲ್ಲಿಯೂ ದೇವದೇವತೆಗಳ ಕಲ್ಪನೆ ಇದೆ. ಸೂರ್ಯ ಚಂದ್ರಾದಿಗಳನ್ನು, ಮದಿರೆ ಮದನಾದಿಗಳನ್ನು ಪ್ರತಿನಿಧಿಸುವ ದೇವತೆಗಳಿದ್ದಾರೆ. ಅವರೆಲ್ಲರೂ ಮನುಷ್ಯ ಸ್ವಭಾವದ ಹಲವು ಮುಖಗಳನ್ನು ಬಿತ್ತರಿಸುತ್ತಾರೆ. ಅವುಗಳನ್ನು ಸಂಕೇತಗಳೆಂದಷ್ಟೇ ತಿಳಿಯಬೇಕು. ಅವು ಕೇವಲ ತೋರುಗಂಬಗಳು. ಸಂಸ್ಕೃತಿಯನ್ನು ಕಟ್ಟುವಲ್ಲಿ ಶಿಷ್ಟ ಮತ್ತು ದುಷ್ಟ ಶಕ್ತಿಗಳು ಹೇಗೆ ಒಂದುಗೂಡುತ್ತವೆ ಎಂಬುದನ್ನು ಸಾಂದರ್ಭಿಕವಾಗಿ ಈ ಕಥೆಯಲ್ಲಿ ನೋಡಬಹುದು.

ಅಪೊಲೋ ಮತ್ತು ಡಯೋನಿಸಸ್ ಎಂಬುವರು ಜಿಯಸ್‌ನ ಮಕ್ಕಳು. ಅಪೊಲೋ ಸೂರ್ಯ ದೇವರಾದರೆ, ಡಯೋನಿಸಸ್ ಸುರೆ ದೇವರು. ಅಪೊಲೋ ವ್ಯಕ್ತಿನಿಷ್ಠ. ಅವನಿಗೆ ಸ್ಪಷ್ಟ ಮಾರ್ಗವಿದೆ, ತರ್ಕವಿದೆ, ಮುಂಗಾಣ್ಕೆ ಇದೆ. ಡಯೋನಿಸಸ್ ಹಾಗಲ್ಲ. ಅವನು ವ್ಯಸ್ತ, ಅಮಲಿಗ, ಬಣ್ಣದ ಕನಸುಗಳನ್ನು ಮೇಯುವವನು. ಈ ಇಬ್ಬರು ದೇವತೆಗಳನ್ನು ಗ್ರೀಕರು ವಿರೋಧಿಗಳೆಂದು ಗಣಿಸಲಿಲ್ಲ. ಬದಲಾಗಿ ಇವರು ಒಬ್ಬರಿಗೊಬ್ಬರು ಪೂರಕವಾಗಿದ್ದರು. ಹಾಗಾಗಿಯೇ ಇಲಿಯಡ್, ಈಡಿಪಸ್ ನಂಥ ಮಹಾ ದುರಂತ ಕಾವ್ಯಗಳು ಜನ್ಮ ತಾಳಿದವು. ಈ ಅಪೊಲೋನಿಯನ್ ಮತ್ತು ಡಯನೀಷೀಯನ್ ಮಾರ್ಗಗಳನ್ನು ತತ್ತ್ವಶಾಸ್ತ್ರಜ್ಞ ನೀಷೆ ತನ್ನ ಬರ್ತ್ ಆಫ್ ಟ್ರ್ಯಾಜಿಡಿ ಕೃತಿಯಲ್ಲಿ ವಿವರವಾಗಿ ಚರ್ಚಿಸಿದ್ದಾನೆ. ಇವೆರಡರ ಬೀಜಮೂಲ ಏಕತೆಯನ್ನು (Primordial unity) ಚೆನ್ನಾಗಿ ಗುರುತಿಸಿದ್ದಾನೆ. ಹಸಿವು, ನಿದ್ರೆಗಳಂತೆಯೆ ಮೈಥುನವೂ ಮೂಲಭೂತ ವಾಂಛೆಯಾಗಿ ಮನುಷ್ಯರೂಪೀ ದೇವತೆಗಳನ್ನು ಕಾಡಿದ್ದರೆ ಆಶ್ಚರ್ಯವೇನಿಲ್ಲ. ಜಗತ್ತಿಗೆ ಕಾಮಸೂತ್ರವನ್ನು ನೀಡಿದ ಸಂಸ್ಕೃತಿಯಲ್ಲಿ ಲೈಂಗಿಕತೆ ಅಸ್ಪೃಶ್ಯವೆನಿಸಿರುವುದು ವಿಪರ್ಯಾಸವೆ ಸರಿ!

ಭಾರತೀಯ ಮನಸ್ಸು ಹೆಚ್ಚು ಡಯನೀಷಿಯನ್ ಆದ್ದರಿಂದಲೇ ಅದು ಸಾಹಿತ್ಯ, ಸಂಗೀತ, ಶಿಲ್ಪ, ನೃತ್ಯ ಕಲೆಗಳ ಆಗರವಾಯಿತು. ಪಾಶ್ಚಿಮಾತ್ಯರು ಹೆಚ್ಚು ಅಪೊಲೋನಿಯನ್ ಆಗಿದ್ದಾರೆ. ಆದ್ದರಿಂದ ಅವರು ವಿಜ್ಞಾನದಲ್ಲಿ ಮುಂದು. ಕಾಕತಾಳೀಯವೆನ್ನುವಂತೆ ಮೆದುಳಿನ ಎಡಭಾಗ (ಪಶ್ಚಿಮ) ತಾರ್ಕಿಕತೆ, ಲೆಕ್ಕಾಚಾರ, ಅನ್ವೇಷಣೆ ಕುರಿತಾದ ಜ್ಞಾನ ಸಂಬಂಧಿಯಾದರೆ ಬಲಭಾಗ (ಪೂರ್ವ) ಭಾವಸಂಬಂಧೀ ಸೃಜನ ಕಲಾ ಪ್ರಕಾರಗಳ ಕಾರ್ಯಾಗಾರವಾಗಿದೆ. ಪುರಾಣಗಳಲ್ಲಿನ ಪ್ರತಿನಾಯಕರು ದ್ವೇಷಾರ್ಹರಲ್ಲ. ಆದ್ದರಿಂದಲೇ ಇಲ್ಲಿಯೂ ಕರ್ಣ, ದುರ್ಯೋಧನರನ್ನು ಮೆರೆಸುವ ಕಾವ್ಯಗಳು ಸೃಷ್ಟಿಯಾದವು. ಒಂದು ಸಾಹಿತ್ಯ ಕೃತಿಯನ್ನಾಗಲೀ, ಕಲಾಕೃತಿಯನ್ನಾಗಲೀ ನಾವು ಮಗುವಿನ ಮುಗ್ಧತೆಯಿಂದಲೇ ನೋಡಬೇಕಾಗುತ್ತದೆ. ನೀಷೆ ಹೇಳುವಂತೆ ಒಂದು ವಿಮರ್ಶಾತ್ಮಕ ದೂರವನ್ನು (Critical distance) ಕಾಯ್ದುಕೊಳ್ಳಬೇಕಾಗುತ್ತದೆ. ಆಸ್ತಿಕನಾಗಿಯೋ, ನಾಸ್ತಿಕನಾಗಿಯೋ ನೋಡುವ ಅಗತ್ಯವಿಲ್ಲ.

■ ಮೂಚಿ

## ಮಾತೇ ಮುತ್ತು

★ ವ್ಯಕ್ತಿ ಬೇರೆಯವರನ್ನು ಮೋಸಗೊಳಿಸುವ ಸಮಯದಲ್ಲಿ ನಿಜಕ್ಕೂ ಅವನು ಮೋಸ ಹೋಗುತ್ತಾನೆ.

–ಲಾರೋಸೋ

★ ಎಷ್ಟು ತಿಳಿದಿದೆಯೋ ಅದಕ್ಕಿಂತ ಕಡಿಮೆ ಮಾತನಾಡುವುದು ಕ್ಷೇಮ.

–ಶೇಕ್ಸ್‌ಪಿಯರ್

★ ಕೆಲಸವೊಂದಕ್ಕೆ ಪ್ರೇರಣೆ ಬೇಕು, ದಿಟ. ಆದರೆ ಬಹಳಷ್ಟು ಕೆಲಸಗಳು ಮುಂದುವರಿಯಲು ಹವ್ಯಾಸ ಬೆಳೆಸಿಕೊಳ್ಳಬೇಕು.

–ಜಿಮ್‌ರಾನ್

★ ಆಸೆ ಮನುಷ್ಯ ಜೀವನದ ಲಂಗರು ಇದ್ದಂತೆ. ಅದರ ಸಹಾಯವಿಲ್ಲದೆ ಮನುಷ್ಯ ಭವಸಾಗರವನ್ನು ದಾಟಲಾರ. ಆದರೆ ಕೈಕಾಲು ಆಡಿಸದೆ ಕೇವಲ ಆಸೆ ಪಡುವುದರಿಂದ ಕೆಲಸ ಸಾಧಿಸಲಾಗದು.

–ಟಾಲ್‌ಸ್ಟಾಯ್

★ ಸೌಂದರ್ಯ ನೋಡುವವರ ಕಣ್ಣುಗಳಲ್ಲಿರುತ್ತದೆ.

–ರೋಮ್ಯಾರೋಲಾ

★ ಅಗ್ನಿ ಭೋಜನವನ್ನು ಅರಗಿಸಿಕೊಳ್ಳುತ್ತದೆ. ಉಪವಾಸ ದೋಷಗಳನ್ನು ನಾಶ ಮಾಡುತ್ತದೆ.

–ಆಯುರ್ವೇದ

★ ಮನುಷ್ಯ ಕೋಪವನ್ನು ಪ್ರೀತಿಯಿಂದ, ಪಾಪವನ್ನು ಸದಾಚಾರದಿಂದ, ಲೋಭವನ್ನು ದಾನದಿಂದ, ಮಿಥ್ಯೆಯ ಮಾತನ್ನು ಸತ್ಯದಿಂದ ಗೆಲ್ಲಬಲ್ಲ.

–ಗೌತಮ ಬುದ್ಧ

★ ತೋಳ ತನ್ನ ಚರ್ಮವನ್ನು ಬದಲಿಸಬಹುದು, ಆದರೆ ತನ್ನ ಅಭ್ಯಾಸವನ್ನಲ್ಲ.

–ಸೆಟೋನಿಯಸ್

★ ನಿಮ್ಮ ಮೇಲೆ ನಿಮಗೆ ನಂಬಿಕೆ ಹುಟ್ಟಿದಾಗ ಜೀವನ ನಡೆಸುವುದು ಹೇಗೆ ಎಂಬುದು ತಿಳಿಯುತ್ತದೆ.

–ವಾನ್‌ಗೋಥೆ

★ ಯಾರಿಗೆ ಸಂತೋಷ ಬೇಕಾಗಿದೆಯೋ ಅವರು ಆನಂದವನ್ನು ಹಂಚಬೇಕು.

–ಬೈರನ್

★ ಭ್ರಮೆ ಮತ್ತು ವಾಸ್ತವವನ್ನು ಅರಿಯುವ ಸಾಮರ್ಥ್ಯ ಬರುವುದು ಮಾಡಿದ ಕೆಲಸ, ಸೋಲು, ಗೆಲುವು, ನಷ್ಟ ಮುಂತಾದವುಗಳ ಅನುಭವದಿಂದ.

–ಕಾಕಾ ಕಾಲೇಲ್ಕರ್

★ ಹೆಣ್ಣು ಪ್ರೀತಿಸಬಲ್ಲಳು ಇಲ್ಲವೇ ದ್ವೇಷಿಸಬಲ್ಲಳು. ಈ ಎರಡನ್ನು ಬಿಟ್ಟರೆ ಅವಳಿಗೆ ಬೇರೆ ಮಾರ್ಗವೇ ತಿಳಿದಿಲ್ಲ.

–ಸೈರಸ್

★ ನೀನು ಪ್ರಿಯನಾಗಬೇಕೆಂದು ಬಯಸುವುದಾದರೆ ಮೊದಲು ಪ್ರೀತಿಸು, ಪ್ರೀತಿಗೆ ಯೋಗ್ಯನಾಗು.

–ಬೆಂಜಮಿನ್ ಫ್ರಾಂಕ್ಲಿನ್

★ ನಾನು, ನನ್ನದು, ನೀನು, ನಿನ್ನದು– ಈ ನಾಲ್ಕು ಮಾತು ಮರೆತರೆ ಪರಮ ಸುಖ.

–ಸ್ವಾಮಿ ರಾಮತೀರ್ಥರು

★ ಉತ್ಸಾಹಿ ವ್ಯಕ್ತಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಧೈರ್ಯ ಕಳೆದುಕೊಳ್ಳುವುದಿಲ್ಲ.

–ವಾಲ್ಮೀಕಿ